# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ: ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯಕ್ಕೆ ಅಧಿಕಾರ ಮತ್ತು ಪ್ರಕಾರ್ಯಗಳನ್ನು ಪ್ರತ್ಯಾಯೋಜಿಸುವ ಬಗ್ಗೆ.**

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿಪಿಆರ್ 52 ಜಿಪಿಎಸ್ 2020, ದಿನಾಂಕ: 07-05-2020.
2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 469 ಗ್ರಾಪಂಅ 2020, ದಿನಾಂಕ: 04-06-2020.

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ದಿನಾಂಕ:07-05-2020 ರ ಆದೇಶದಲ್ಲಿ ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯವನ್ನು ಸ್ಥಾಪಿಸಲಾಗಿದೆ. ಸದರಿ ಆದೇಶದಲ್ಲಿ ಆಯುಕ್ತರ ಹುದ್ದೆಯನ್ನು ಸಹ ಸೃಜಿಸಲಾಗಿದೆ. ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ದಿನಾಂಕ:04-06-2020 ರ ಆದೇಶದಲ್ಲಿ ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯಕ್ಕೆ ಹುದ್ದೆಗಳನ್ನು ಹಂಚಿಕೆ ಮಾಡಿ ಆದೇಶಿಸಲಾಗಿದೆ. ಪ್ರಸ್ತುತ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 232 ಎ ರಡಿ ಸ್ಥಾಪನೆಯಾದ ಆಯುಕ್ತಾಲಯದ ರಚನೆಯ ಸ್ವರೂಪವನ್ನು ಮತ್ತು ಆಯುಕ್ತಾಲಯದ ಆಯುಕ್ತರು, ನಿರ್ದೇಶಕರು, ಜಂಟಿ ನಿರ್ದೇಶಕರು ಹಾಗೂ ಉಪನಿರ್ದೇಶಕರುಗಳಿಗೆ ಅಧಿಕಾರ ಮತ್ತು ಪ್ರಕಾರ್ಯಗಳನ್ನು ನಿರ್ದಿಷ್ಟಪಡಿಸಲು ಸರ್ಕಾರವು ನಿರ್ಧರಿಸಿದೆ.

ಆದ್ದರಿಂದ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 469 ಗ್ರಾಪಂಅ 2020 (1)**
**ಬೆಂಗಳೂರು, ದಿನಾಂಕ: 08-06-2020.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 232 ಎ ರಡಿ ಸ್ಥಾಪನೆಯಾದ ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯಕ್ಕೆ ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧ-1 ರಲ್ಲಿ ಆಯುಕ್ತಾಲಯದ ರಚನೆಯ

ಸ್ವರೂಪವನ್ನು ಮತ್ತು ಅನುಬಂಧ-2 ರಲ್ಲಿ ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯದ ಆಯುಕ್ತರು, ನಿರ್ದೇಶಕರು, ಜಂಟಿ ನಿರ್ದೇಶಕರು ಹಾಗೂ ಉಪನಿರ್ದೇಶಕರುಗಳಿಗೆ ನೀಡಲಾದ ಅಧಿಕಾರ ಮತ್ತು ಪ್ರಕಾರ್ಯಗಳನ್ನು ನಿರ್ದಿಷ್ಟಪಡಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಉಮಾ ಮಹಾದೇವನ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಇವರಿಗೆ,**

1) ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು-560001 ಇವರಿಗೆ ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಲು;
2) ಪ್ರಧಾನ ಮಹಾಲೇಖಪಾಲರು, (ಎ ಮತ್ತು ಇ) ಕರ್ನಾಟಕ, ಬೆಂಗಳೂರು.
3) ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
4) ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
5) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
6) ಅಭಿವೃದ್ಧಿ ಆಯುಕ್ತರು ಮತ್ತು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
7) ಸರ್ಕಾರದ ಎಲ್ಲಾ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿಗಳು / ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು.
8) ಕಾರ್ಯದರ್ಶಿ, ರಾಜ್ಯ ಚುನಾವಣಾ ಆಯೋಗ, ಬೆಂಗಳೂರು.
9) ಪ್ರಾದೇಶಿಕ ಆಯುಕ್ತರು, ಬೆಂಗಳೂರು, ಮೈಸೂರು, ಕಲಬುರ್ಗಿ ಮತ್ತು ಬೆಳಗಾವಿ ವಿಭಾಗಗಳು.
10) ಆಯುಕ್ತರು, ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು.
11) ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.
12) ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿವಾಹಕ ಅಧಿಕಾರಿಗಳು.


13) ವ್ಯವಸ್ಥಾಪಕ ನಿರ್ದೇಶಕರು, ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಬೆಂಗಳೂರು.
14) ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
15) ನಿರ್ದೇಶಕರು, ಎನ್.ಐ.ಸಿ, ಬೆಂಗಳೂರು.
16) ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಂಸ್ಥೆ, ಮೈಸೂರು.
17) ಕುಲಸಚಿವರು, ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ.
18) ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು..
19) ಉಪ ನಿರ್ದೇಶಕರು, ಖಜಾನೆ ಗಣಕ ಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ಬೆಂಗಳೂರು.
20) ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು.
21) ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು.

ಪ್ರತಿ:

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು / ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್) ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ರವರ ಆಪ್ತ ಕಾರ್ಯದರ್ಶಿ.
3. ಎಲ್ಲಾ ಆಯುಕ್ತರು / ವ್ಯವಸ್ಥಾಪಕ ನಿರ್ದೇಶಕರು / ನಿರ್ದೇಶಕರುಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
4. ಉಪ ಕಾರ್ಯದರ್ಶಿ (ಆಡಳಿತ-1/ಆಡಳಿತ-2) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
5. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
6. ನಿರ್ದೇಶಕರು (ಪಂ.ರಾಜ್-1/2) ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ರವರ ಆಪ್ತ ಸಹಾಯಕರು.
7. ಸಂಪಾದಕರು, ಕರ್ನಾಟಕ ವಿಕಾಸ ಪತ್ರಿಕೆ/ವೆಬ್‌ಸೈಟ್, ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ.
8. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.

ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 469 ಗ್ರಾಪಂಅ 2020 (1), ದಿನಾಂಕ:08-06-2020 ಕ್ಕೆ ಅನುಬಂಧ-1

## ORGANISATION CHART OF PANCHAYATH RAJ COMMISSIONERATE




(ಉಮಾ ಮಹಾದೇವನ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 469 ಗ್ರಾಪಂಅ 2020 (1), ದಿನಾಂಕ:08-06-2020 ಕ್ಕೆ ಅನುಬಂಧ-2**

**ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯದ ಆಯುಕ್ತರು, ನಿರ್ದೇಶಕರು, ಜಂಟಿ ನಿರ್ದೇಶಕರು ಹಾಗೂ ಉಪನಿರ್ದೇಶಕರುಗಳಿಗೆ ನೀಡಲಾದ ಅಧಿಕಾರ ಮತ್ತು ಪ್ರಕಾರ್ಯಗಳ ವಿವರ**

| ಕ್ರಮ ಸಂಖ್ಯೆ | ಹುದ್ದೆಗಳ ಪದನಾಮ | ಹುದ್ದೆಗಳ ಸಂಖ್ಯೆ | ಆರ್ಥಿಕ ಮತ್ತು ಆಡಳಿತಾತ್ಮಕ ಅಧಿಕಾರ | ಪ್ರಕಾರ್ಯಗಳು |
|---|---|---|---|---|
| 1 | ಆಯುಕ್ತರು (ಭಾ.ಆ.ಸೇ)<br><br>ಆಪ್ತ ಶಾಖೆ<br><br>1) ಶೀಘ್ರಲಿಪಿಗಾರ (1)<br>2) ಬೆರಳಚ್ಚುಗಾರ (1)<br>3) ವಾಹನ ಚಾಲಕ (1)<br>4) ಗ್ರೂಪ್-ಡಿ (2) | 1<br><br>5 | ಆರ್ಥಿಕ ಇಲಾಖೆಯ ಸರ್ಕಾರದ ಆದೇಶ ಸಂಖ್ಯೆ: ಆಇ 03 ಟಿಎಫ್‌ಪಿ 2018, ದಿನಾಂಕ:14-05-2018 ರಲ್ಲಿ ಇಲಾಖಾ ಮುಖ್ಯಸ್ಥರಿಗೆ ನಿಗಧಿಪಡಿಸಲಾದ ಅಧಿಕಾರಗಳು | (1) ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಎಲ್ಲಾ ಆಡಳಿತಾತ್ಮಕ ಕ್ರಮಗಳನ್ನು ಕೈಗೊಳ್ಳುವುದು.<br>(2) ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸರ್ಕಾರದ ವತಿಯಿಂದ ಹೊರಡಿಸಲಾದ ಎಲ್ಲಾ ನಿಯಮಗಳು, ಉಪವಿಧಿಗಳು, ಆದೇಶಗಳು, ಸುತ್ತೋಲೆಗಳು ಹಾಗೂ ಕಾಲಕಾಲಕ್ಕೆ ಸರ್ಕಾರದಿಂದ ನೀಡಲಾಗುವ ನಿರ್ದೇಶನಗಳನ್ನು ಅನುಷ್ಠಾನಗೊಳಿಸುವುದು.<br>(3) ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರಡಿ ಅಸ್ತಿತ್ವದಲ್ಲಿರುವ ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳಾದ ಗ್ರಾಮ, ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿಗಳಿಗೆ ವಹಿಸಲಾದ ಪ್ರಕಾರ್ಯಗಳ ಅನುಷ್ಠಾನಕ್ಕೆ ಅವಶ್ಯವಿರುವ ಕ್ರಮಗಳನ್ನು ಕೈಗೊಳ್ಳುವುದು.<br>(4) ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳಾದ ಗ್ರಾಮ, ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ವಿವಿಧ ಯೋಜನೆಗಳು/ಕಾರ್ಯಕ್ರಮಗಳ ಮೂಲಕ ನೀಡಲಾಗುವ ಅನುದಾನ ಸಂಬಂಧಿಸಿದ ಪಂ.ರಾಜ್ ಸಂಸ್ಥೆಗಳಿಗೆ ಬಿಡುಗಡೆ ಮಾಡುವುದು, ಮೇಲ್ವಿಚಾರಣೆ ಮಾಡುವುದು ಹಾಗೂ ಪರಿಣಾಮಕಾರಿಯಾಗಿ/ಪಾರದರ್ಶಕವಾಗಿ ಬಳಕೆ ಮಾಡಲು ಎಲ್ಲಾ ಅವಶ್ಯ ಕ್ರಮಗಳನ್ನು ಕೈಗೊಳ್ಳುವುದು.<br>(5) ಆಯುಕ್ತಾಲಯಕ್ಕೆ ಸಂಬಂಧಿಸಿದ ಅಧಿಕಾರಿಗಳು ಮತ್ತು ನೌಕರರ ಸೇವಾ ವಿಷಯಗಳು.<br>(6) ಗ್ರಾಮ, ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿ ಅಧಿಕಾರಿಗಳು ಮತ್ತು ನೌಕರರ ನೇಮಕಾತಿ, ಜೇಷ್ಠತೆ, ಮುಂಬಡ್ತಿ ಸೇವಾ ವಿಷಯಗಳು.<br>(7) ಗ್ರಾಮ ಪಂಚಾಯಿತಿ ನೌಕರರ ನೇಮಕಾತಿ, ಅನುಮೋದನೆ, ಜೇಷ್ಠತೆ ಮತ್ತು ಮುಂಬಡ್ತಿಗೆ ಸಂಬಂಧಿಸಿದ ವಿಷಯಗಳು.<br>(8) ಗ್ರಾಮ ಪಂಚಾಯತಿ ಗ್ರಂಥಾಲಯ ಮೇಲ್ವಿಚಾರಕರ ಸೇವಾ ಮತ್ತು ಗೌರವಧನ ಬಿಡುಗಡೆ ವಿಷಯಗಳು.<br>(9) ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಇ-ಆಡಳಿತಕ್ಕೆ ಸಂಬಂಧಿಸಿದ ವಿಷಯಗಳು.<br>(10) ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯಿದೆಯಡಿ ಬರುವ ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳ ಸಾರ್ವಜನಿಕ ಕುಂದು ಕೊರತೆ ವಿಷಯಗಳು (ಕುಂದು ಕೊರತೆ ಪ್ರಾಧಿಕಾರಗಳ ವಿಷಯಗಳು ಸೇರಿದಂತೆ) |

| | | | | |
|---|---|---|---|---|
| | | | | (11) ಕರ್ನಾಟಕ ಸಿವಿಲ್ ಸೇವಾ (ಸಿಸಿಎ) ನಿಯಮಗಳು, 1957 ರನ್ವಯ ಮೇಲ್ಮನವಿ ವಿಷಯಗಳು.<br>(12) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖಾ ವತಿಯಿಂದ ಪ್ರಕಟಿಸಲಾಗುತ್ತಿರುವ ಕರ್ನಾಟಕ ವಿಕಾಸ ಮಾಸ ಪತ್ರಿಕೆ ಹೊರತರುವ ವಿಷಯಗಳು.<br>(13) ಕೇಂದ್ರ ಮತ್ತು ರಾಜ್ಯ ಸರ್ಕಾರದ ವತಿಯಿಂದ ರಾಜ್ಯ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳಿಗೆ ನೀಡಲಾಗುವ ಪ್ರಶಸ್ತಿಗೆ ಸಂಬಂಧಿಸಿದ ವಿಷಯಗಳು.<br>(14) ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂ.ರಾಜ್ ಅಧಿನಿಯಮ 1993 ರ ಪ್ರಕರಣಗಳು ಮತ್ತು ನಿಯಮಗಳು, ಉಪವಿಧಿಗಳಿಗೆ ಅವಶ್ಯ ತಿದ್ದುಪಡಿಗಳಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದು.<br>(15) ಅಭಿವೃದ್ಧಿ ಆಯುಕ್ತರ ಸಿಬ್ಬಂದಿ ಶಾಖೆಯಲ್ಲಿ ನಿರ್ವಹಿಸಲಾಗುತ್ತಿದ್ದ ವಿಷಯಗಳು.<br>(16) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಕಾಲಕಾಲಕ್ಕೆ ನೀಡುವ ಸೂಚನೆ / ಸಲಹೆ / ಮಾರ್ಗಸೂಚಿಗಳನ್ನು ಅನುಷ್ಠಾನಗೊಳಿಸುವುದು. |
| 2 | ನಿರ್ದೇಶಕರು (ಆಡಳಿತ-1)<br><br>ಆಪ್ತ ಶಾಖೆ<br><br>1) ಶೀಘ್ರಲಿಪಿಗಾರ (1)<br>2) ಬೆರಳಚ್ಚುಗಾರ (1)<br>3) ವಾಹನ ಚಾಲಕ (1)<br>4) ಗ್ರೂಪ್-ಡಿ (1) | 1<br><br>4 | ಆರ್ಥಿಕ ಇಲಾಖೆಯು ಸರ್ಕಾರದ ಆದೇಶ ಸಂಖ್ಯೆ: ಆಇ 03 ಟಿಎಫ್‌ಪಿ 2018, ದಿನಾಂಕ:14-05-2018 ರಲ್ಲಿ ವಿಭಾಗ ಮಟ್ಟದ ಅಧಿಕಾರಿಗಳಿಗೆ ನಿಗಧಿಪಡಿಸಲಾದ ಅಧಿಕಾರಗಳು | (1) ಬೆಂಗಳೂರು ಮತ್ತು ಮೈಸೂರು ವಿಭಾಗಕ್ಕೆ ಸಂಬಂಧಿಸಿದಂತೆ ಗ್ರಾಮ ಪಂಚಾಯತಿ ವಿಷಯಗಳ ಕಾರ್ಯನಿರ್ವಹಣೆ<br>(2) ಆಯುಕ್ತರು ವಹಿಸುವ ಇನ್ನಿತರೆ ಯಾವುದೇ ಜವಾಬ್ದಾರಿಗಳು. |
| 3 | ನಿರ್ದೇಶಕರು (ಆಡಳಿತ-2)<br><br>ಆಪ್ತ ಶಾಖೆ<br><br>1) ಶೀಘ್ರಲಿಪಿಗಾರ (1)<br>2) ಬೆರಳಚ್ಚುಗಾರ (1)<br>3) ವಾಹನ ಚಾಲಕ (1)<br>4) ಗ್ರೂಪ್-ಡಿ (1) | 1<br><br>4 | ಆರ್ಥಿಕ ಇಲಾಖೆಯು ಸರ್ಕಾರದ ಆದೇಶ ಸಂಖ್ಯೆ: ಆಇ 03 ಟಿಎಫ್‌ಪಿ 2018, ದಿನಾಂಕ:14-05-2018 ರಲ್ಲಿ ವಿಭಾಗ ಮಟ್ಟದ ಅಧಿಕಾರಿಗಳಿಗೆ ನಿಗಧಿಪಡಿಸಲಾದ ಅಧಿಕಾರಗಳು | 1) ಕಲಬುರಗಿ ಮತ್ತು ಬೆಳಗಾವಿ ವಿಭಾಗಕ್ಕೆ ಸಂಬಂಧಿಸಿದಂತೆ ಗ್ರಾಮ ಪಂಚಾಯತಿ ವಿಷಯಗಳ ಕಾರ್ಯನಿರ್ವಹಣೆ<br>2) ಆಯುಕ್ತರು ವಹಿಸುವ ಇನ್ನಿತರೆ ಯಾವುದೇ ಜವಾಬ್ದಾರಿಗಳು. |
| 4 | ನಿರ್ದೇಶಕರು (ಅಭಿವೃದ್ಧಿ) | 1 | ಆರ್ಥಿಕ ಇಲಾಖೆಯು ಸರ್ಕಾರದ ಆದೇಶ | (1) ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತಿಗಳ ವಿಷಯಗಳು<br>(2) ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರಡಿ ಅಸ್ತಿತ್ವದಲ್ಲಿರುವ |

| | | | | |
|---|---|---|---|---|
| | **ಆಪ್ತ ಶಾಖೆ**<br>1) ಶೀಘ್ರಲಿಪಿಗಾರ (1)<br>2) ಬೆರಳಚ್ಚುಗಾರ (1)<br>3) ವಾಹನ ಚಾಲಕ (1)<br>4) ಗ್ರೂಪ್–ಡಿ (1) | 4 | ಸಂಖ್ಯೆ: ಆಇ 03 ಟಿಎಫ್‌ಪಿ 2018, ದಿನಾಂಕ:14–05–2018 ರಲ್ಲಿ ವಿಭಾಗ ಮಟ್ಟದ ಅಧಿಕಾರಿಗಳಿಗೆ ನಿಗಧಿಪಡಿಸಲಾದ ಅಧಿಕಾರಗಳು | ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳಾದ ಗ್ರಾಮ, ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿಗಳಿಗೆ ವಹಿಸಲಾದ ಪ್ರಕಾರ್ಯಗಳ ಅನುಷ್ಠಾನಕ್ಕೆ ಅವಶ್ಯವಿರುವ ಕ್ರಮಗಳನ್ನು ಕೈಗೊಳ್ಳುವುದು.<br>(3) ಕೇಂದ್ರ ಮತ್ತು ರಾಜ್ಯ ಸರ್ಕಾರದ ವತಿಯಿಂದ ರಾಜ್ಯ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳಿಗೆ ನೀಡಲಾಗುವ ಪ್ರಶಸ್ತಿಗೆ ಸಂಬಂಧಿಸಿದ ವಿಷಯಗಳು.<br>(4) ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂ.ರಾಜ್ ಅಧಿನಿಯಮ 1993 ರ ಪ್ರಕರಣಗಳು ಮತ್ತು ನಿಯಮಗಳು, ಉಪವಿಧಿಗಳಿಗೆ ಅವಶ್ಯ ತಿದ್ದುಪಡಿಗಳಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದು.<br>(5) ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳಾದ ಗ್ರಾಮ, ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ವಿವಿಧ ಯೋಜನೆಗಳು/ಕಾರ್ಯಕ್ರಮಗಳ ಮೂಲಕ ನೀಡಲಾಗುವ ಅನುದಾನ ಸಂಬಂಧಿಸಿದ ಪಂ.ರಾಜ್ ಸಂಸ್ಥೆಗಳಿಗೆ ಬಿಡುಗಡೆ ಮಾಡುವುದು, ಮೇಲ್ವಿಚಾರಣೆ ಮಾಡುವುದು ಹಾಗೂ ಪರಿಣಾಮಕಾರಿಯಾಗಿ/ ಪಾರದರ್ಶಕವಾಗಿ ಬಳಕೆ ಮಾಡಲು ಎಲ್ಲಾ ಅವಶ್ಯ ಕ್ರಮಗಳನ್ನು ಕೈಗೊಳ್ಳುವುದು.<br>(6) ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸರ್ಕಾರದ ವತಿಯಿಂದ ಹೊರಡಿಸಲಾದ ಎಲ್ಲಾ ನಿಯಮಗಳು, ಉಪವಿಧಿಗಳು, ಆದೇಶಗಳು, ಸುತ್ತೋಲೆಗಳು ಹಾಗೂ ಕಾಲಕಾಲಕ್ಕೆ ಸರ್ಕಾರದಿಂದ ನೀಡಲಾಗುವ ನಿರ್ದೇಶನಗಳನ್ನು ಅನುಷ್ಠಾನಗೊಳಿಸುವುದು.<br>(7) ಆಯುಕ್ತರಿಗೆ ನಿಗದಿಪಡಿಸಿರುವ ಜವಾಬ್ದಾರಿಗಳನ್ನು ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಷಯಗಳಿಗೆ ಸಂಬಂಧಿಸಿದಂತೆ ಜಾರಿಗೊಳಿಸಲು ಆಯುಕ್ತರಿಗೆ ನೆರವಾಗುವುದು.<br>(8) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಕಾಲಕಾಲಕ್ಕೆ ನೀಡುವ ಸೂಚನೆ / ಸಲಹೆ / ಮಾರ್ಗಸೂಚಿಗಳನ್ನು ಅನುಷ್ಠಾನಗೊಳಿಸುವುದು.<br>(9) ಆಯುಕ್ತರು ವಹಿಸುವ ಇನ್ನಿತರೆ ಯಾವುದೇ ಜವಾಬ್ದಾರಿಗಳು. |
| 5 | ಜಂಟಿ ನಿರ್ದೇಶಕರು (ಸಿಬ್ಬಂದಿ ಮತ್ತು ಸಮನ್ವಯ)<br><br>**ಆಪ್ತ ಶಾಖೆ**<br>1) ಶೀಘ್ರಲಿಪಿಗಾರ (1)<br>2) ಬೆರಳಚ್ಚುಗಾರ (1)<br>3) ವಾಹನ ಚಾಲಕ (1)<br>4) ಗ್ರೂಪ್–ಡಿ (1) | 1<br><br><br>4 | ಆರ್ಥಿಕ ಇಲಾಖೆಯ ಸರ್ಕಾರದ ಆದೇಶ ಸಂಖ್ಯೆ: ಆಇ 03 ಟಿಎಫ್‌ಪಿ 2018, ದಿನಾಂಕ:14–05–2018 ರಲ್ಲಿ ವಿಭಾಗ ಮಟ್ಟದ ಅಧಿಕಾರಿಗಳಿಗೆ ನಿಗಧಿಪಡಿಸಲಾದ ಅಧಿಕಾರಗಳು | (1) ಆಯುಕ್ತಾಲಯಕ್ಕೆ ಸಂಬಂಧಿಸಿದ ಅಧಿಕಾರಿಗಳು ಮತ್ತು ನೌಕರರ ಸೇವಾ ವಿಷಯಗಳು.<br>(2) ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಇ–ಆಡಳಿತಕ್ಕೆ ಸಂಬಂಧಿಸಿದ ವಿಷಯಗಳು.<br>(3) ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯಿದೆಯಡಿ ಬರುವ ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳ ಸಾರ್ವಜನಿಕ ಕುಂದು ಕೊರತೆ ವಿಷಯಗಳು (ಕುಂದು ಕೊರತೆ ಪ್ರಾಧಿಕಾರಗಳ ವಿಷಯಗಳು ಸೇರಿದಂತೆ)<br>(4) ಮಹಾಲೇಖಪಾಲರ ಪತ್ರಗಳಿಗೆ ಸಂಬಂಧಿಸಿದ ವಿಷಯಗಳು.<br>(5) ಕರ್ನಾಟಕ ವಿಧಾನ ಮಂಡಲದ ಸಮಿತಿಗಳಿಗೆ ಮಾಹಿತಿ ಒದಗಿಸುವುದು.<br>(6) ಕರ್ನಾಟಕ ವಿಧಾನ ಸಭೆ, ವಿಧಾನ ಪರಿಷತ್, ಲೋಕಸಭೆ, ರಾಜ್ಯಸಭೆ ಪ್ರಶ್ನೆಗಳು.<br>(7) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖಾ ವತಿಯಿಂದ ಪ್ರಕಟಿಸಲಾಗುತ್ತಿರುವ |

| | | | | |
|---|---|---|---|---|
| | | | | ಕರ್ನಾಟಕ ವಿಕಾಸ ಮಾಸ ಪತ್ರಿಕೆ ಹೊರತರುವುದು.<br>(8) ಆಯುಕ್ತರು ವಹಿಸಬಹುದಾದ ಇನ್ನಿತರೆ ಜವಾಬ್ದಾರಿಗಳು. |
| 6 | ಉಪ ನಿರ್ದೇಶಕರು–1 | 1 | – | 1) ಬೆಂಗಳೂರು ವಿಭಾಗಕ್ಕೆ ಸಂಬಂಧಿಸಿದ ಗ್ರಾಮ ಪಂಚಾಯತಿ ವಿಷಯಗಳು.<br>2) ಆಯುಕ್ತರು/ನಿರ್ದೇಶಕರು ವಹಿಸುವ ಇನ್ನಿತರೆ ಯಾವುದೇ ಜವಾಬ್ದಾರಿಗಳು. |
| 7 | ಉಪ ನಿರ್ದೇಶಕರು–2 | 1 | – | 1) ಮೈಸೂರು ವಿಭಾಗಕ್ಕೆ ಸಂಬಂಧಿಸಿದ ಗ್ರಾಮ ಪಂಚಾಯತಿ ವಿಷಯಗಳು.<br>2) ಆಯುಕ್ತರು/ನಿರ್ದೇಶಕರು ವಹಿಸುವ ಇನ್ನಿತರೆ ಯಾವುದೇ ಜವಾಬ್ದಾರಿಗಳು. |
| 8 | ಉಪ ನಿರ್ದೇಶಕರು–3 | 1 | – | 1) ಕಲಬುರಗಿ ವಿಭಾಗಕ್ಕೆ ಸಂಬಂಧಿಸಿದ ಗ್ರಾಮ ಪಂಚಾಯತಿ ವಿಷಯಗಳು.<br>2) ಆಯುಕ್ತರು/ನಿರ್ದೇಶಕರು ವಹಿಸುವ ಇನ್ನಿತರೆ ಯಾವುದೇ ಜವಾಬ್ದಾರಿಗಳು. |
| 9 | ಉಪ ನಿರ್ದೇಶಕರು–4 | 1 | – | 1) ಬೆಳಗಾವಿ ವಿಭಾಗಕ್ಕೆ ಸಂಬಂಧಿಸಿದ ಗ್ರಾಮ ಪಂಚಾಯತಿ ವಿಷಯಗಳು.<br>2) ಆಯುಕ್ತರು/ನಿರ್ದೇಶಕರು ವಹಿಸುವ ಇನ್ನಿತರೆ ಯಾವುದೇ ಜವಾಬ್ದಾರಿಗಳು. |
| 10 | ಉಪ ನಿರ್ದೇಶಕರು–5<br><br>**ಸಹಾಯಕ ಸಿಬ್ಬಂದಿ:**<br>ಸಹಾಯಕ ಸಾಂಖ್ಯಿಕ ಅಧಿಕಾರಿ (2) | 1 | – | 1) ಅನುದಾನ ಬಿಡುಗಡೆ ಅನುಷ್ಠಾನ ಮತ್ತು ನಿರ್ವಹಣೆಗೆ ಸಂಬಂಧಿಸಿದ ವಿಷಯಗಳು<br>2) ಆಯುಕ್ತರು/ನಿರ್ದೇಶಕರು ವಹಿಸುವ ಇನ್ನಿತರೆ ಯಾವುದೇ ಜವಾಬ್ದಾರಿಗಳು. |
| 11 | ಉಪ ನಿರ್ದೇಶಕರು–6 | 1 | – | 1) ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಪಂಚಾಯತ್ ರಾಜ್ ವಿಷಯಗಳು ಹಾಗೂ ಆಡಳಿತ ವಿಷಯಗಳು.<br>2) ಆಯುಕ್ತರು/ನಿರ್ದೇಶಕರು ವಹಿಸುವ ಇನ್ನಿತರೆ ಯಾವುದೇ ಜವಾಬ್ದಾರಿಗಳು. |
| 12 | ಉಪ ನಿರ್ದೇಶಕರು–7 | 1 | – | 1) ಕಾನೂನು ವಿಷಯಗಳ ನಿರ್ವಹಣೆ<br>2) ಆಯುಕ್ತರು/ನಿರ್ದೇಶಕರು ವಹಿಸುವ ಇನ್ನಿತರೆ ಯಾವುದೇ ಜವಾಬ್ದಾರಿಗಳು. |
| 13 | ಉಪ ನಿರ್ದೇಶಕರು–8 | 1 | – | 1) ಸಮನ್ವಯ ವಿಷಯಗಳ ನಿರ್ವಹಣೆ<br>2) ವೇತನ ಬಟವಾಡೆ ಮತ್ತು ಸೆಳೆಯುವ ಅಧಿಕಾರಿ (ಡಿಡಿಒ) ಆಗಿ ಕಾರ್ಯನಿರ್ವಹಣೆ<br>3) ಆಯುಕ್ತರು/ನಿರ್ದೇಶಕರು ವಹಿಸುವ ಇನ್ನಿತರೆ ಯಾವುದೇ ಜವಾಬ್ದಾರಿಗಳು. |

**(ಉಮಾ ಮಹಾದೇವನ್)**
ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.